

# ಸತ್ತಿದ್ದ ನನ್ನನ್ನು ಬದುಕಿಸಿದ್ದು ಅವ್ವನ ಹಟ

## ಕಂಬದ ರಂಗಯ್ಯ, ಝೀ ಕನ್ನಡದ ಸರಿಗಮಪ ಸ್ಪರ್ಧಿ

**◆ ನಿಮ್ಮ ಪರಿಚಯ ಹೇಳಿ...**

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕು ಸೂರ್ಯನಹಳ್ಳಿ ನನ್ನೂರು. ಅಪ್ಪ–ಅಮ್ಮ ಕೂಲಿ ಮಾಡ್ತಿದ್ದರು. ಈಗವರು ವೃದ್ಧಾಪ್ಯದಲ್ಲಿದ್ದಾರೆ. ಮೊದಲು ಹರಿಕತೆ ಮಾಡ್ತಾ ಇದ್ದೆ. ಅಲ್ಲಿಂದ ಆರ್ಕೆಸ್ಟ್ರಾಗಳಲ್ಲಿ ಹಾಡಲು ಆರಂಭಿಸಿದೆ. ನಂತರ ಎಂಟು ವರ್ಷ ಹಂಸಲೇಖ ಅವರ ಜೊತೆ ಸೇರಿ ಸಿನಿಮಾಗಳಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ. ಈಗ 'ಅರಬ್ಬೀ' ಸಿನಿಮಾಕ್ಕೆ ಸಂಗೀತ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ. ಸಿನಿಮಾ ಕೂಡ ಸೆನ್ಸಾರ್ ಆಗಿದೆ. ಇದರ ಜೊತೆ ಬೇರೆ ಕಡೆ ಸಿಗುವ ಕಾರ್ಯಕ್ರಮಗಳಿಗೆ ಹೋಗುತ್ತೇನೆ.

**◆ ನಿಮಗೆ ಕಂಬದ ರಂಗಯ್ಯ ಎಂದು ಹೆಸರಿಡಲು ಕಾರಣ ಏನು?**

ಅವ್ವ ಮೊದಲು ಶಿವಕುಮಾರ್ ಎಂದು ಹೆಸರಿಟ್ಟದ್ದರಂತೆ. ಸರಿಸುಮಾರು 1978ರ ಆಸುಪಾಸಿರಬಹುದು. ನಾನಾಗ ಒಂದೆರಡು ವರ್ಷದ ಕೂಸಂತೆ. ಏನೋ ಕಾಯಿಲೆ ಬಂದಿತ್ತಂತೆ. ಬಾಯಿಯಲ್ಲೆ ನೊರೆ ಬಂದು ಮೂರ್ಛೆ ಹೋಗಿದ್ನಂತೆ. ಊರಲ್ಲಿ ಜನ ಮಗು ಸತ್ತಿದೆ ಎಂದೇ ತೀರ್ಮಾನಿಸಿದ್ದಾರೆ. ಅವ್ವ ಇಲ್ಲ, ನನ್ನ ಕೂಸು ಸತ್ತಿಲ್ಲ ಎನ್ನುವ ಹಟ. ಸ್ಮಶಾನಕ್ಕೆ ತೆಗೆದುಕೊಂಡು ಹೋಗುವುದಿಲ್ಲ. ನಮ್ಮ ದೇವರ ಹತ್ತಿರ ಕರೆದುಕೊಂಡು ಹೋಗುತ್ತೇನೆ ಎಂದು ಶಿರಾ ಸಮೀಪದ ಮಾಗೋಡು ಎಂಬ ಹಳ್ಳಿಯ ರಂಗನಾಥಸ್ವಾಮಿ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗಿದ್ದಾರೆ. ನಮ್ಮೂರಿನಿಂದ 25 ಕಿ.ಮೀ. ದೂರದ ದೇವಸ್ಥಾನಕ್ಕೆ ನಡೆದುಕೊಂಡೇ ಹೋಗಿದ್ದಾಳೆ. ದೇವಸ್ಥಾನದ ಜಗುಲಿಮೇಲೆ ನನ್ನ ಮಲಗಿಸಿ ಅಳುತ್ತಿದ್ದಳಂತೆ. ಒಬ್ಬ ತಾತ ಬಂದು ಆಕೆಗೆ ಸಮಾಧಾನ ಮಾಡಿದ್ದಾರೆ. ಮಗುವಿಗೆ ಏನೂ ಆಗಿಲ್ಲ, ಹಾಲು ಕುಡಿಸು ಎಂದು ಹೇಳಿದ್ದಾರೆ. ಅಮ್ಮ ಎದೆಹಾಲು ಕುಡಿಸಲು ಪ್ರಯತ್ನಿಸಿದ್ದಾಳೆ ಆಗ ನಾನು ಬದುಕಿದ್ದೇನೆ ಎಂದು ಖಚಿತವಾಗಿದೆ. ಊರ ಜನ ಅಂತ್ಯಸಂಸ್ಕಾರ ಮಾಡಲು ಹೇಳುತ್ತಿದ್ದರು ನಾನು ಇಲ್ಲಿಗೆ ತಂದೆ ಸ್ವಾಮಿ ಎಂದು ಆ ತಾತನಿಗೆ ಅವ್ವ ತನಗೆ ತಿಳಿದಂತೆ ಕೃತಜ್ಞತೆಯನ್ನು ಸಲ್ಲಿಸಿದ್ದಾಳೆ. ದೇವರ ಸನ್ನಿಧಿಗೆ ಬಂದಿದ್ದೀಯಾ 'ಕಂಬದ ರಂಗನಾಥ' ಅಂತಾನೇ ಹೆಸರಿಡು. ಮುಂದೆ ಅವನಿಗೆ ಒಳ್ಳೆಯದಾಗಬಹುದು ಎಂದು ಹೇಳಿದ್ದರಂತೆ. ಹಾಗಾಗಿ ಶಿವಕುಮಾರನಾಗಿದ್ದ ನಾನು ಕಂಬದ ರಂಗಯ್ಯನಾಗಿ ಬದಲಾದೆ.

**◆ ಸಂಗೀತ ಹೇಗೆ ಕಲಿತಿದ್ದು...**

ನಮ್ಮ ಶಾಲೆಯಲ್ಲಿ ವೆಂಕಟೇಶಮೂರ್ತಿ ಎಂಬ ಮೇಷ್ಟ್ರು ಇದ್ದರು. ಅವರಿಗೆ ಸಂಗೀತದ ಆಸಕ್ತಿ ಇತ್ತು. ಆಗಾಗ ದಾಸರ ಕೀರ್ತನೆಗಳ ಚುಟುಕುಗಳನ್ನು ಗುನುಗುತ್ತಿದ್ದರು. ಕನ್ನಡದ ಪದ್ಯಗಳನ್ನು ರಾಗಬದ್ಧವಾಗಿ ಹಾಡಿಸುತ್ತಿದ್ದರು. ಒಂದು ಪದ್ಯವನ್ನು ಮೂರು ರಾಗದಲ್ಲಿ ಹಾಡಿಸುತ್ತಿದ್ದರು. ಶಾಲೆಯಲ್ಲಿ ಶಾರದಾ ಪೂಜೆ ಅಥವಾ ಏನಾದರೂ ಕಾರ್ಯಕ್ರಮ ಇದ್ದರೆ ನನ್ನಿಂದ ಹಾಡಿಸುತ್ತಿದ್ದರು. ಅದೇ ನನ್ನ ಸಂಗೀತ ಪಾಠ. ತೀರಾ ಬಡತನದ ಕುಟುಂಬ ನಮ್ಮದು. ಕಷ್ಟದಲ್ಲಿ ಓದು ಅಷ್ಟಕ್ಕೆ ನಿಂತಿತ್ತು. ನಮ್ಮ ಸಂಬಂಧಿಕರೊಬ್ಬರು ಹರಿಕಥೆ ಹೇಳ್ತಾ ಇದ್ದರು. ಅದನ್ನು ನಮ್ಮ ಅಣ್ಣ ಕಲಿತು ಹೇಳುತ್ತಿದ್ದ. ಅವನ ಜೊತೆ ನಾನೂ ಹರಿಕಥೆಗೆ ಹೋಗುತ್ತಿದ್ದೆ. ಆಗ ಮಂಗಳಾರತಿ ಹಣ, ಅಕ್ಕಿ, ಬೇಳೆ, ವಸ್ತ್ರ ದಾನ ನೀಡುತ್ತಿದ್ದರು. ಅದೇ ನಮಗೆ ಜೀವನಾಧಾರವಾಗಿತ್ತು.

ನಾನು ಹರಿಕಥೆ ಮಾಡಿದ್ದು ಒಂದು ಸಂದಿಗ್ಧ ಸಂದರ್ಭದಲ್ಲಿ. ನಮ್ಮ ದೊಡ್ಡಮ್ಮ ಗುಬ್ಬಿ ತಾಲ್ಲೂಕಿನ ಚೇಳೂರು ಸಮೀಪದ ಶೇಷನಹಳ್ಳಿಯಲ್ಲಿದ್ದರು. ಅವರು ಸ್ವಲ್ಪ ಸ್ಥಿತಿವಂತರು. ಕೊಯ್ಲಿನ ಸಂದರ್ಭದಲ್ಲಿ ಅಲ್ಲಿಗೆ ಹೋಗಿ ಕೆಲಸ ಮಾಡಿ ಒಂದಿಷ್ಟು ಕಾಳು ಸಂಗ್ರಹಿಸುತ್ತಿದ್ದೆ. ನಿಮ್ಮಣ್ಣ ಕಥೆ ಚೆನ್ನಾಗಿ ಮಾಡ್ತಾನಂತೆ ಈ ಊರಲ್ಲಿ ಒಮ್ಮೆ ಶನಿಕಥೆ ಹಾಡಿಸೋಣ ಎಂದು ಚಂದಾ ಎತ್ತಿ 500 ರೂ. ನನ್ನ ಕೈಗೆ ಕೊಟ್ಟರು. ನಮ್ಮಣ್ಣನಿಗೆ ಹೋಗಿ ಹೇಳಿದ್ದೂ ಆಯ್ತು. ಅನಿವಾರ್ಯ ಕಾರಣಕ್ಕೆ ಅವನಿಗೆ ಅವತ್ತು ಬರಲು ಸಾಧ್ಯ ಆಗಲಿಲ್ಲ. ಊರಲ್ಲಿ ಎಲ್ಲ ಏರ್ಪಾಡು ಮಾಡಿಕೊಂಡಿದ್ದಾರೆ. ಗ್ರಾಮಸ್ಥರು ನನಗೆ ಬೈಯುತ್ತಿದ್ದಾರೆ. ಆಗ ಕಥೆ ಮಾಡಲೇಬೇಕಾಯ್ತು. ನನ್ನ ದೊಡ್ಡಮ್ಮನ ಬಳಿಗೆ ಹೋಗಿ ನನಗೂ ಹೇಳಲು ಬರುತ್ತದೆ. ಈ ಊರಲ್ಲಿ ಶನಿದೇವರ ಕಥೆಯ ಪುಸ್ತಕ ಯಾರ ಮನೆಯಲ್ಲಿದೆ ಎಂದು ವಿಚಾರಿಸಿ ಅವರ ಬಳಿಗೆ ಹೋಗಿ ಪುಸ್ತಕ ತಂದೆ. ಪಕ್ಕದ ಹಳ್ಳಿಯಲ್ಲಿ ಒಬ್ಬರು ಹಾರ್ಮೋನಿಯಂ ನುಡಿಸುವವರು ಸಿಕ್ಕರು. ಜೊತೆಗೆ ಮೃದಂಗ ನುಡಿಸುವ ತಾತ ಸಿಕ್ಕರು. ದೇವರ ಮೇಲೆ ಭಾರ ಹಾಕಿ ನಮ್ಮಣ್ಣನ ಶೈಲಿಯಲ್ಲಿಯೇ ಹಾಡಿದೆ. ಕಥೆ ಚೆನ್ನಾಗಿ ಬಂತು. ಅವತ್ತಿನಿಂದ ಆ ಊರಿನ ಜನ 'ದಾಸರೆ' ಎನ್ನಲು ಆರಂಭಿಸಿದರು. ನಂತರ ಅದೇ ನನಗೆ ಜೀವನ ಮಾರ್ಗವಾಯಿತು. ಒಂದು ತಂಡ ಕಟ್ಟಿಕೊಂಡು ಹಾಡಲು ಆರಂಭಿಸಿದೆ. ಆ ಮೂಲಕವೂ ಸಂಗೀತ ಸ್ವಲ್ಪ ಕಲಿತೆ. ಸಂಬಂಧಿ ಮಾರಣ್ಣನ ಸಲಹೆಯಂತೆ ಆರ್ಕೆಸ್ಟ್ರಾಕ್ಕೆ ಸೇರಿದೆ. ಅಲ್ಲಿ ಶ್ರೀನಿವಾಸ ಎಂಬ ಗುರುಗಳು ಸಿಕ್ಕರು. ಅವರು ನನಗೆ ಹಾಡನ್ನು ಕಲಿಸಿದರು. ಎಂಟು ವರ್ಷ ಅವರ ಸಂಸ್ಥೆಯಲ್ಲಿ ಇದ್ದೆ. ಅಲ್ಲಿಂದ ಹಂಸಲೇಖ ಪರಿಚಯವಾಗಿ ಅವರ ಜೊತೆ ಕೆಲಸ ಮಾಡಿದೆ. ತುಂಬ ಕೆಲಸವನ್ನು ಕಲಿಸಿದರು. ಸರಿಗಮಪ 17ರಲ್ಲಿ ಅವಕಾಶ ಸಿಕ್ಕಿತು.

**◆ ಸರಿಗಮಪದಲ್ಲಿ ನೀವೇ ಮೊದಲು ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಬಿಂಬಿತವಾಗಿತ್ತು.**

ಖಂಡಿತ ಹಾಗೆ ಅನ್ನಿಸಿತ್ತು. ಅದಾಗಲಿಲ್ಲ, ಒಂದಿಷ್ಟು ನಿರಾಸೆ ಅನಿಸಿತ್ತು. ಆದರೆ ಜನರ ಅಪಾರ ಪ್ರೀತಿ ಸಿಕ್ಕಿದೆ. ಯಾವುದಾದರೂ ಊರಿಗೆ ಹೋದಾಗ ಈಗ ಸಿಗುವ ಅಭಿಮಾನ ಹೇಳಲು ಸಾಧ್ಯವೇ ಇಲ್ಲ. ಅದೆಲ್ಲ ಝೀ ಕನ್ನಡದ ಸ್ಪರ್ಧೆಯಿಂದ ಸಿಕ್ಕಿದೆ. ಸರಿಗಮಪದಲ್ಲಿ ಗೆಲುವು ಮುಖ್ಯ ಅಲ್ಲ. ನಾನು ಜನರ ಮನಸ್ಸು ಗೆದ್ದಿದ್ದೇನೆ ಎಂದು ಅನಿಸುತ್ತದೆ. ಇಂತಹ ಕಷ್ಟದ ಕಾಲದಲ್ಲಿ ನನ್ನ ಬಾಳಿನಲ್ಲಿ ಹೊಸಬೆಳಕು ಮೂಡಿದೆ ಎಂದು ನಾನು ಅರಿತಿದ್ದೇನೆ. ನಾನು ಆಯ್ಕೆ ಮಾಡಿಕೊಂಡು ಹಾಡುತ್ತಿದ್ದ ಹಾಡು ಜನರನ್ನು ತಲುಪಿದೆ. ಕೊರೊನಾ ಬಂದ ಸಂದರ್ಭದಲ್ಲಿ ನಾನುಪಟ್ಟ ಕಷ್ಟ ಅಷ್ಟಿಷ್ಟಲ್ಲ. ಒಂದು ಹೊತ್ತಿನ ಊಟಕ್ಕೂ ಪರಿತಪ್ಪಿಸಿದ್ದೇನೆ. ಇದೇ ನೋವಿನಿಂದ ವೇದಿಕೆಯಲ್ಲೇ ಒಮ್ಮೇ ಕಣ್ಣೀರು ಹಾಕಿದ್ದೆ.

**■ ರಾಘವೇಂದ್ರ ಕೆ.**